## ಬಲಗಾಲಿಟ್ಟು ಒಳಗೆ ಬಾ

ನನ್ನ ತಂಗಿ ಹೊಸದಾಗಿ ಗಂಡನ ಮನೆಗೆ ಹೋದಾಗಿನ ಅನುಭವ. ಅವಳಿಗೆ ಎಡ–ಬಲ ಅನ್ನುವುದು ಯಾವಾಗಲೂ ಗೊಂದಲದ ವಿಷಯ. ಅವರದು ಪ್ರೇಮ ವಿವಾಹವಾದ್ದರಿಂದ ಅವಳ ಈ ಸಂಕಷ್ಟ ಅವಳ ಗಂಡನಿಗೂ ಗೊತ್ತಿತ್ತು. ಮದುವೆಯ ನಂತರ ಗಂಡನ ಮನೆಗೆ ಕಾಲಿಡುವಾಗ ಅಕ್ಕಿಯ ಸೇರನ್ನು ಬಲಗಾಲಿನಿಂದ ಒದ್ದು ಒಳಗೆ ಕಾಲಿಡುವುದು ಸಂಪ್ರದಾಯ. ಅವಳತ್ತೆ 'ಬಲಗಾಲಿಟ್ಟು ಒಳಗೆ ಬಾರಮ್ಮ' ಅಂದಾಗ, ಇವಳು ಯಾವುದು ಬಲಗಾಲು ಎನ್ನುವ ಗೊಂದಲಕ್ಕೆ ಬಿದ್ದಳು. ಕೂಡಲೇ ಗಂಡ, 'ಈ ಕಾಲು ಕಣೆ ಮಾರಾಯ್ತಿ' ಎಂದು ಅವಳ ತೊಡೆ ಮುಟ್ಟಿ ತೋರಿಸಿ, ಎಚ್ಚರಿಸಿದ್ದಕ್ಕೆ ಅದೇ ಕಾಲು ಎತ್ತಿಟ್ಟಿದ್ದಳು.

**ಸುವರ್ಣ ಮಠ**





ಕಲೆ: ಗಣೇಶ ಆಚಾರ್ಯ

## ಒಂದೇ ಬೆಕ್ಕು

ಒಂದನೇ ತರಗತಿ ಓದುತ್ತಿರುವ ಸುಪರ್ಣೆ ನಮ್ಮ ಮನೆ ಪಕ್ಕದ ಮುದ್ದು ಹುಡುಗಿ. ಆವತ್ತು ಟೀಚರ್ ಮೇಲೆ ಸಿಟ್ಟು ಮಾಡಿಕೊಂಡು ಬಂದಿದ್ದಳು. ಏನಾಯ್ತು ಎಂದು ಕೇಳಿದೆ. ''ಆಂಟಿ, ಮೇಡಂ ಒಂದು ಪ್ರಶ್ನೆ ಕೇಳಿದ್ರು, 'ನಿನಗೆ ಮೊನ್ನೆ ಎರಡು ಬೆಕ್ಕು, ನಿನ್ನೆ ಎರಡು ಬೆಕ್ಕು ಕೊಟ್ಟಿದ್ದೆ, ಇವತ್ತು ಮತ್ತೆ ಎರಡು ಬೆಕ್ಕು ಕೊಡ್ತೀನಿ, ಹಾಗಾದ್ರೆ ನಿನ್ನ ಬಳಿ ಒಟ್ಟು ಎಷ್ಟು ಬೆಕ್ಕು ಆದವು?' ಅಂತ. ನಾನು ಒಂದು ಅಂದೆ''. 'ನೀನು ಗಣಿತದಲ್ಲಿ ಜಾಣೆ ಅಲ್ಲವೆ? ಅದ್ಹೇಗೆ ತಪ್ಪು ಉತ್ತರ ಕೊಟ್ಟೆ?' ಅಂದೆ. 'ಇಲ್ಲ ಆಂಟಿ, ನಾನು ತಪ್ಪು ಹೇಳಿಲ್ಲ, ಸುಳ್ಳು ಹೇಳಿದ್ದು ಅವರೇ. ಮೊನ್ನೆ ಎರಡು, ನಿನ್ನೆ ಎರಡು ಬೆಕ್ಕು ಕೊಟ್ಟೆ ಅಂತ ಹೇಳಿದ್ದೂ ಸುಳ್ಳು, ಇವತ್ತು ಎರಡು ಬೆಕ್ಕು ಕೊಡೋಕಂತೂ ಸಾಧ್ಯ ಇಲ್ಲ. ಹೀಗಾಗಿ, ನಮ್ಮನೆಯಲ್ಲಿ ಇರೊ ಒಂದು ಬೆಕ್ಕು ಮಾತ್ರ ಸತ್ಯ. ಅದಕ್ಕೇ ನಾನು ಒಂದು ಎಂದೆ'.

**ಅನುಪಮಾ ವಿ.ಎಸ್.**